# ವಿಶ್ವಕಪ್ ಟಿಕೆಟ್ ಮಾರಾಟ ಆರಂಭ

**ಬೆಂಗಳೂರು:** ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ 2011ರ ವಿಶ್ವಕಪ್ ಪಂದ್ಯಗಳಿಗೆ ಆನ್‌ಲೈನ್ ಟಿಕೆಟ್‌ಗಳ ಮಾರಾಟ ಆರಂಭವಾಗಿದೆ. ಆನ್‌ಲೈನ್ ಟಿಕೆಟ್ ಕೊಳ್ಳಬಯಸುವವರು ಐಸಿಸಿ ಅಧಿಕೃತ ವೆಬ್‌ಸೈಟ್ ಆದ iccevents.yahoo.com ಮೂಲಕ ಖರೀದಿಸಬಹುದಾಗಿದೆ.

ಟಿಕೆಟ್ ಖರೀದಿಸಲು ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ ನೆಟ್ ಬ್ಯಾಂಕಿಂಗ್‌ನ್ನು ಉಪಯೋಗಿಸಬಹುದಾಗಿದೆ. ಟಿಕೆಟ್‌ಗಳನ್ನು ಪಂದ್ಯಕ್ಕೂ ಮುನ್ನ ಕೋರಿಯರ್ ಮೂಲಕ ಅಥವಾ ಹತ್ತಿರದ ಟಿಕೆಟ್ ಮಾರಟ ಕೌಂಟರ್‌ಗಳ ಮೂಲಕ ಕೊಂಡವರಿಗೆ ತಲುಪಿಸಲಾಗುತ್ತದೆ. ಟಿಕೆಟ್ ಕೊಳ್ಳುವವರಿಗೆ ಅನುಕೂಲವಾಗಲೆಂದು ವಿಶ್ವಕಪ್ ಆರಂಭವಾಗಲು ಇನ್ನೂ 9 ತಿಂಗಳ ಮುನ್ನವೇ ಟಿಕೆಟ್ ಮಾರಟ ಆರಂಭಿಸಲಾಗಿದೆ. ಕೆಲ ಷರತ್‌ಗಳ ಆಧಾರದ ಮೇಲೆ ಮಾತ್ರ ಟಿಕೆಟ್ ಹಣವನ್ನು ಹಿಂತಿರುಗಿಸುವ ವ್ಯವಸ್ಥೆಯೂ ಇದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಾಲ್ಕು ವಿಶ್ವಕಪ್ ಪಂದ್ಯಗಳು ನಡೆಯಲಿವೆ.